MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - WEDNESDAY 14-6-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತಕ್ಕೆ ಪಾಮೆಣ್ಣೆ ಪೂರೈಕೆದಾರನಾಗಿ ಗುರುತಿಸಿಕೊಂಡ ಥೈಲಾಂಡ್

ಹಿಂದಿನ ವರ್ಷ ಎಪ್ರಿಲ್‌ನಲ್ಲಿ ಇಂಡೋನೇಶಿಯಾ ಪಾಮೆಣ್ಣೆ ರಫ್ತು ನಿರ್ಬಂಧಿಸಿತ್ತು. ಆ ಸಮಯದಲ್ಲಿ ಥೈಲಾಂಡ್, ಭಾರತಕ್ಕೆ ಕಚ್ಚಾ ಪಾಮೆಣ್ಣೆ ಪೂರೈಸಿತ್ತೆನ್ನಲಾಗಿದೆ. ಆವಾಗ ಥೈಲಾಂಡ್ ಭಾರತಕ್ಕೆ ಕಡಿಮೆ ಪ್ರಮಾಣದ ಪೂರೈಕೆದಾರವಾಗಿತ್ತು. ನಂತರ ಪೂರೈಕೆ ಹೆಚ್ಚಳವಾಗಿ ಈಗ ವಾರ್ಷಿಕ ಆಮದಿನ 15 ಶೇಕಡಾಕ್ಕೂ ಹೆಚ್ಚು ಪೂರೈಕೆ ಮಾಡುವುದರೊಂದಿಗೆ ಪ್ರಮುಖ ಪೂರೈಕೆದಾರನಾಗುತ್ತಿದೆ. ಥೈಲಾಂಡ್ ನ ಪಾಮೆಣ್ಣೆ ಆಮದಿಗೆ ರಫ್ತು ಲೆವಿ ಪಾವತಿಸಬೇಕಾಗಿಲ್ಲವೆನ್ನಲಾಗಿದೆ. ಆದರೆ ಇಂಡೋನೇಶಿಯಾ ಮತ್ತು ಮಲೇಶಿಯಾಗಳಿಂದ ಆಮದಾಗುವ ಪಾಮೆಣ್ಣೆ ಅಲ್ಲಿ ರಫ್ತು ಲೆವಿ ಪಾವತಿಸಬೇಕಾಗಿದೆ. 2021-22 ರಲ್ಲಿ ಥೈಲಾಂಡ್ ನಿಂದ 6.98 ಲಕ್ಷ ಟನ್ ಪಾಮೆಣ್ಣೆ ಆಮದಾಗಿದೆಯೆನ್ನಲಾಗಿದ್ದು, 2022-23 ರಲ್ಲಿ ತೈಲ ವರ್ಷದ ಪ್ರಥಮ 6 ತಿಂಗಳಲ್ಲಿ (2022 ನವೆಂಬರ್-2023 ಎಪ್ರಿಲ್) 5.73 ಲಕ್ಷ ಟನ್ ಆಮದು ಮಾಡಲಾಗಿದೆಯೆನ್ನಲಾಗಿದೆ. ಥೈಲಾಂಡ್ ನಲ್ಲಿ 3.5 ಮಿಲಿಯನ್ ಟನ್ ಪಾಮೆಣ್ಣೆ (ವರ್ಷಕ್ಕೆ) ಉತ್ಪಾದಿಸಲಾಗುತ್ತಿದೆಯೆನ್ನಲಾಗಿದೆ.

## ಮಲೇಶೀಯನ್ ಪಾಮೆಣ್ಣೆ ದರ 2 ವಾರಗಳ ಗರಿಷ್ಠ ಮಟ್ಟಕ್ಕೇರಿಕೆ

ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 2 ನೇ ದಿನ ಹೆಚ್ಚಳವಾಗಿ (3 ಶೇಕಡಾ, ಟನ್‌ಗೆ 107 ರಿಂಗಿಟ್ಸ್ ಹೆಚ್ಚಳ) 3523 ರಿಂಗಿಟ್ಸ್ ($ 763.05) ಆಗಿ ಹದಿನೆರಡು ವಾರಗಳ ಗರಿಷ್ಠ ಮಟ್ಟಕ್ಕೇರಿದೆಯೆನ್ನಲಾಗಿದೆ. ಎಲ್ ನಿನೋ ಪರಿಣಾಮ ಜೂನ್ ಉತ್ಪಾದನೆ ಇಳಿಕೆಯಾಗುವ ನಿರೀಕ್ಷೆ ಹಾಗೂ ಪರ್ಯಾಯ ಖಾದ್ಯತೈಲಗಳ ದರ ಪ್ರಬಲತೆಯಿಂದಾಗಿ ಪಾಮೆಣ್ಣೆ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## ಗೋಧಿ ದಾಸ್ತಾನು ಮಿತಿ ಹೇರಿಕೆ

ಗೋಧಿ ದರ ಹಿಂದಿನ ಒಂದು ತಿಂಗಳಿಂದ 8 ಶೇಕಡಾ ಹೆಚ್ಚಳವಾದ ಪರಿಣಾಮ ಕೇಂದ್ರ ಸರಕಾರ ಗೋಧಿ ದಾಸ್ತಾನು ಮಿತಿ ಹೇರಿಕೆ ಆಗಿದೆಯೆನ್ನಲಾಗಿದೆ. ದಾಸ್ತಾನು ಮಿತಿ 2024 ಮಾರ್ಚ ತನಕ ಮುಂದುವರಿಯಲಿದೆಯೆನ್ನಲಾಗಿದೆ. ಇದರನ್ವಯ ವ್ಯಾಪಾರಿಗಳು 3000 ಟನ್ ದಾಸ್ತಾನು ಹೊಂದಬಹುದೆನ್ನಲಾಗಿದೆ. ಚಿಲ್ಲರೆ ಸರಪಣೆಯವರು 10 ಟನ್ ದಾಸ್ತಾನು ಪ್ರತಿ ಔಟ್‌ಲೆಟ್ ಗೆ ಹಾಗೂ ಒಟ್ಟು 3000 ಟನ್ ದಾಸ್ತಾನು ಹೊಂದಿರಬಹುದಾಗಿದೆ. ಸಾಕಷ್ಟು ದಾಸ್ತಾನು ಹೊಂದಿರುವುದರಿಂದ ಯಾವುದೇ ಆಮದು ಪ್ರಸ್ತಾಪವಿಲ್ಲವೆನ್ನಲಾಗಿದೆ. 15 ಲಕ್ಷ ಟನ್ ಗೋಧಿ ಹಾಗೂ ಅಕ್ಕಿ ಮಾರುಕಟ್ಟೆಗೆ ಲಭ್ಯವಾಗುವಂತೆ ಮಾಡಲಾಗಿದೆಯೆನ್ನಲಾಗಿದೆ.

## ಅರೆಬಿಕಾ ಕಾಫಿ ದರ ಇಳಿಕೆ, ರಾಬೆಸ್ಟಾ ದರ ಹೆಚ್ಚಳ

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಜಿಲ್‌ನಲ್ಲಿ ಕಟಾವು ಹಾಗೂ ಸಂಗ್ರಹಕ್ಕೆ ಪೂರಕ ವಾತಾವರಣವಿರುವುದರಿಂದ ಅರೆಬಿಕಾ ಕಾಫಿ ದರ ಇಳಿಕೆಯಾಗಿದೆ. ಪೂರೈಕೆ ಇಳಿಕೆಯಿಂದ ರಾಬೆಸ್ಟಾ ದರ ಹೆಚ್ಚಳವಾಗಿದೆ.